# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರದ ಸೌರ ನೀತಿ 2014-21 ರನ್ವಯ ಭೂಮಾಲೀಕತ್ವ ಹೊಂದಿರುವ ರೈತರಿಗೆ ಹಂಚಿಕೆಯಾಗಿರುವ 01-03 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳ ಸ್ಥಳ ಬದಲಾವಣೆ ಕುರಿತು.

ಓದಲಾಗಿದೆ: 1, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014, ದಿನಾಂಕ: 22.05.2014.
2. ಸರ್ಕಾರದ ಆದೇಶ ಸಂಖ್ಯೆ: ಇಎನ್ 62 ವಿಎಸ್‌ಸಿ 2014, ದಿನಾಂಕ: 26.08.2014.

***

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯನ್ವಯ ಸರ್ಕಾರ ಹೊರಡಿಸಿರುವ ಸೌರ ನೀತಿ 2014-21 ರ 8ನೇ ಷರತ್ತಿನ (Clause) Segment-I ರ Category-I ರಲ್ಲಿ ರೈತರು ತಮ್ಮ ಸ್ವಂತ ಜಮೀನಿನಲ್ಲಿ 01 ರಿಂದ 03 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಸೌರ ನೀತಿ 2014-21 ರನ್ವಯ ರೈತ ವರ್ಗಕ್ಕೆ ಹಂಚಿಕೆ ಮಾಡಲು ಉದ್ದೇಶಿಸಿರುವ ಒಟ್ಟು 300 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳ ಹಂಚಿಕೆ ಮತ್ತು ಇತರ ಪ್ರಕ್ರಿಯೆಗಳನ್ನು ಸಮರ್ಪಕವಾಗಿ ಮತ್ತು ಪಾರದರ್ಶಕವಾಗಿ ಹಾಗೂ ಮೀಸಲಾತಿಯನ್ನು ಅಳವಡಿಸಿಕೊಂಡು ನಿರ್ವಹಿಸಲು ಕೆಲವು ಷರತ್ತುಗಳನ್ನೊಳಗೊಂಡಂತೆ ಸರ್ಕಾರವು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ರನ್ವಯ ಪ್ರತ್ಯೇಕ ಮಾರ್ಗಸೂಚಿಯನ್ನು ಹೊರಡಿಸಿತ್ತು.

ಸರ್ಕಾರದ ಮಾರ್ಗಸೂಚಿಯನ್ನು ಆಧರಿಸಿ ಕೆ.ಆರ್.ಇ.ಡಿ.ಎಲ್ ಸಂಸ್ಥೆಯ ವತಿಯಿಂದ ದಿನಾಂಕ: 19.09.2014 ರಂದು ರಾಜ್ಯದ ಪ್ರಮುಖ ದಿನ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸಿ, ಅರ್ಹ ಭೂಮಾಲೀಕರಿಂದ ಅಂತರ್ಜಾಲದ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ರೀತಿ ಅಂತರ್ಜಾಲದ ಮೂಲಕ ಅರ್ಜಿ ಸಲ್ಲಿಸುವ ಮುನ್ನ ರೈತರು ಕೆ.ಆರ್.ಇ.ಡಿ.ಎಲ್ ವತಿಯಿಂದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದ್ದ ಪ್ರತ್ಯೇಕ ಮಾರ್ಗಸೂಚಿಗಳನ್ನು ಓದಿಕೊಂಡು ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರನ್ವಯ, ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಿ ಅರ್ಹತೆ, ಸಲ್ಲಿಸಿದ ದಾಖಲಾತಿಗಳು, ಮೀಸಲಾತಿ ಮತ್ತು ಜೇಷ್ಠತೆಯನ್ನು ಆಧರಿಸಿ, ಘಟಕಗಳ ಹಂಚಿಕೆ ಪತ್ರ ಪಡೆದ ದಿನಾಂಕದಿಂದ 18 ತಿಂಗಳೊಳಗಾಗಿ ಘಟಕಗಳನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಪತ್ರ ನೀಡಲಾಗಿತ್ತು. ಈ ರೀತಿ ಸೌರ ಘಟಕಗಳ ಹಂಚಿಕೆ ಪತ್ರ ಪಡೆದ ರೈತರು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಂಡಿರುತ್ತಾರೆ.

ಈ ರೀತಿ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡ ನಂತರ ಕೆಲವು ರೈತ ಫಲಾನುಭವಿಗಳು ತಮಗೆ ಹಂಚಿಕೆಯಾಗಿರುವ ಸೌರ ವಿದ್ಯುತ್ ಘಟಕದ ತಮ್ಮ ಜಮೀನುಗಳು ಅತ್ಯಂತ ಫಲವತ್ತಾದ ನೀರಾವರಿ/ತೋಟದ ಜಮೀನುಗಳಾಗಿದ್ದು, ಕಬ್ಬು, ತೆಂಗು, ಅಡಿಕೆ, ಬಾಳೆ, ಮಾವು ಹಾಗೂ ಇನ್ನಿತರೆ ವಾಣಿಜ್ಯ ಬೆಳೆಗಳನ್ನು ಹೊಂದಿರುವ ಜಮೀನುಗಳಾಗಿದ್ದು, ಈ ಜಮೀನಿನಲ್ಲಿ ಸೌರ ವಿದ್ಯುತ್ ಘಟಕ ಸ್ಥಾಪಿಸಬೇಕಾದಲ್ಲಿ, ಅಲ್ಲಿರುವ ವಾಣಿಜ್ಯ ಬೆಳೆಗಳ ಗಿಡ, ಮರಗಳನ್ನು ಕಟಾವು ಮಾಡಬೇಕಾಗುತ್ತದೆ. ಅಲ್ಲದೆ, ಇದಕ್ಕೆ ಅರಣ್ಯ ಇಲಾಖೆಯ ಅನುಮತಿಯನ್ನು ಸಹ ಪಡೆಯಬೇಕಾಗುತ್ತದೆ. ಹೀಗಾಗಿ, ತಮಗೆ ಹಂಚಿಕೆಯಾಗಿರುವ ಸೌರ ವಿದ್ಯುತ್ ಘಟಕಗಳನ್ನು ಬೇರೆಡೆಗೆ ಅಂದರೆ, ಇದಕ್ಕಾಗಿಯೇ ಖರೀದಿಸಿರುವ / ಖರೀದಿಸಲು ಉದ್ದೇಶಿಸಿರುವ ಜಮೀನುಗಳಲ್ಲಿ ಸ್ಥಾಪಿಸಲು ಅವಕಾಶ ಕಲ್ಪಿಸಿ ಸ್ಥಳ ಬದಲಾವಣೆ ಮಾಡಿಕೊಡಬೇಕೆಂದು ಹಾಗೂ ಸದರಿ ಸೌರ ಘಟಕಗಳ ಅನುಷ್ಠಾನಕ್ಕೆ ಹೆಚ್ಚುವರಿಯಾಗಿ 06 ತಿಂಗಳ ಕಾಲಾವಧಿ ವಿಸ್ತರಿಸಬೇಕೆಂದು ಕೋರಿಕೆ ಸಲ್ಲಿಸಿರುತ್ತಾರೆ.

ಈ ರೀತಿ ಸೌರ ಘಟಕ ಹಂಚಿಕೆಗೊಂಡ ಭೂ ಮಾಲೀಕತ್ವ ಹೊಂದಿದ ರೈತರಿಗೆ ಅಂದು ಚಾಲ್ತಿಯಲ್ಲಿದ್ದ ಕೆ.ಇ.ಆರ್.ಸಿ ದರ ಪ್ರತಿ ಯೂನಿಟ್‌ಗೆ ರೂ.8.40/- ರಂತೆ ನಿಗಧಿಪಡಿಸಲಾಗಿತ್ತು. ಸದರಿ ಹಂಚಿಕೆದಾರರಿಗೆ ಯೋಜನೆಯನ್ನು ಅನುಷ್ಠಾಗೊಳಿಸಲು ಯೋಜನೆ ಹಂಚಿಕೆಯಾದ ದಿನಾಂಕದಿಂದ 18 ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಆದರೆ, ಸೌರ ಘಟಕಗಳ ಹಂಚಿಕೆ ಪಡೆದ ಕೆಲವು ರೈತರು ಸೌರ ಘಟಕ ಹಂಚಿಕೆಯಾಗಿರುವ ಜಮೀನುಗಳು ಫಲವತ್ತಾದ ವಾಣಿಜ್ಯ ಬೆಳೆ ಬೆಳೆಯುವ ಜಮೀನುಗಳಾಗಿರುವುದರಿಂದ, ಸದರಿ ಸೌರ ಘಟಕಗಳನ್ನು ಬಂಜರು ಭೂಮಿಯಲ್ಲಿ ಮತ್ತು ಹೆಚ್ಚಿನ ಸೋಲಾರ್ ರೇಡಿಯೇಷನ್ ದೊರೆಯುವ ಸ್ಥಳಗಳಿಗೆ ಸ್ಥಳ ಬದಲಾವಣೆ ಮಾಡುವಂತೆ ಸಲ್ಲಿಸಿರುವ ಕೋರಿಕೆಗಳನ್ನು, ಕೂಲಂಕಷವಾಗಿ ಪರಿಶೀಲಿಸಿ, ಈ ರೀತಿ ರೈತರಿಗೆ ಹಂಚಿಕೆಯಾದ ಸೌರ ಘಟಕಗಳ ಸ್ಥಳ ಬದಲಾವಣೆ ಮಾಡಬೇಕಾದಲ್ಲಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಅರ್ಜಿ ಸಲ್ಲಿಸಿದ ಎಲ್ಲಾ ಫಲಾನುಭವಿಗಳಿಗೂ ಅವಕಾಶ ಕಲ್ಪಿಸಲು ಉದ್ದೇಶಿಸಿ

---2

ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗಿತ್ತು. ಸಚಿವ ಸಂಪುಟವು ಪ್ರಕರಣ ಸಂಖ್ಯೆ: ಸಿ: 40/2017, ದಿನಾಂಕ: 18.01.2017 ರಲ್ಲಿ ಕೆ.ಇ.ಆರ್.ಸಿ ಪ್ರಸ್ತುತ ನಿಗದಿಪಡಿಸಿರುವ ವಿದ್ಯುತ್ ದರ ಪ್ರತಿ ಯೂನಿಟ್‌ಗೆ ರೂ. 6.51/- ರಂತೆ ಪೂರಕ / ಹೊಸದಾಗಿ ಮಾಡಿಕೊಳ್ಳಲಾಗುವ ವಿದ್ಯುತ್ ಖರೀದಿ ಒಪ್ಪಂದದಲ್ಲಿ ನಿಗಧಿಪಡಿಸಬೇಕೆಂಬ ಷರತ್ತಿನೊಂದಿಗೆ ಸಚಿವ ಸಂಪುಟವು ಪ್ರಸ್ತಾವನೆಯನ್ನು ಅನುಮೋದಿಸಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ:-

**ಸರ್ಕಾರದ ಆದೇಶ ಸಂಖ್ಯೆ: ಇಎನ್ 277 ಎನ್‌ಸಿಇ 2015**

**ಬೆಂಗಳೂರು, ದಿನಾಂಕ: 21.01.2017.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸೌರ ನೀತಿ 2014-21 ರನ್ವಯ ಭೂಮಾಲೀಕತ್ವವುಳ್ಳ ರೈತರಿಗೆ ಹಂಚಿಕೆ ಮಾಡಲಾದ ವಿಕೇಂದ್ರೀಕೃತ ವಿದ್ಯುತ್ ಉತ್ಪಾದನೆ ಯೋಜನೆಯಡಿ 1-3 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಹಂಚಿಕೆ ಕುರಿತು ಕರೆಯಲಾಗಿದ್ದ ಅರ್ಜಿ ಪ್ರಕ್ರಿಯೆ ಪೂರ್ಣಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂಖ್ಯೆ: ಇಎನ್ 62 ವಿಎಸ್‌ಸಿ 2014, ದಿನಾಂಕ:26.8.2014 ರನ್ವಯ ಹೊರಡಿಸಲಾಗಿರುವ ಮಾರ್ಗಸೂಚಿಯ ಷರತ್ತುಗಳಿಗೆ, ಸೌರ ನೀತಿ 2014-21 ರ ಇತರೆ ನಿಬಂಧನೆಗಳಿಗೆ ಒಳಪಟ್ಟು ಪೂರ್ವಾನ್ವಯವಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಸೌರ ಘಟಕ ಹಂಚಿಕೆಯಾಗಿ ಸ್ಥಳ ಬದಲಾವಣೆ ಕೋರುವ ಹಾಗೂ ಯೋಜನೆಯ 300 ಮೆ.ವ್ಯಾ ಮಿತಿಯ ಜೇಷ್ಠತೆಯಲ್ಲಿದ್ದು, ತಿರಸ್ಕೃತಗೊಂಡ ಫಲಾನುಭವಿಗಳಿಗೂ ಅನ್ವಯವಾಗುವಂತೆ ಸ್ಥಳ ಬದಲಾವಣೆಗೆ ಅವಕಾಶ ಕಲ್ಪಿಸಿ ಆದೇಶಿಸಿದೆ.

1. ಈ ಯೋಜನೆಯಡಿ ಸೌರ ಘಟಕ ಹಂಚಿಕೆ ಕೋರಿ ಅರ್ಜಿ ಸಲ್ಲಿಸಿ, 300 ಮೆ.ವ್ಯಾ ಮಿತಿಯ ಜೇಷ್ಠತೆಯಲ್ಲಿದ್ದ ಯಾರೇ ಫಲಾನುಭವಿಗಳು ಸ್ಥಳ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದಲ್ಲಿ, ಅಂತಹ ಕೋರಿಕೆಗಳನ್ನು ಪರಿಗಣಿಸತಕ್ಕದ್ದು.
2. ಸೌರ ಘಟಕಗಳ ಸ್ಥಳ ಬದಲಾವಣೆಗೆ ಅನುಮತಿ ಪಡೆದ ಫಲಾನುಭವಿಗಳಿಗೆ ಸೌರ ಘಟಕಗಳ ಅನುಷ್ಠಾನಕ್ಕೆ ಹೆಚ್ಚುವರಿಯಾಗಿ 06 ತಿಂಗಳ ಕಾಲಾವಧಿ ವಿಸ್ತರಿಸತಕ್ಕದ್ದು.
3. ಸೌರ ಘಟಕಗಳ ಸ್ಥಳ ಬದಲಾವಣೆ ಪಡೆದ ರೈತರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ಪೂರಕ / ಹೊಸದಾಗಿ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳತಕ್ಕದ್ದು. ಈ ರೀತಿ ಹೊಸದಾಗಿ ಮಾಡಿಕೊಳ್ಳುವ ವಿದ್ಯುತ್ ಖರೀದಿ ಒಪ್ಪಂದದಲ್ಲಿ ಕೆ.ಇ.ಆರ್.ಸಿ ಯು ಪ್ರಸ್ತುತ ನಿಗಧಿಪಡಿಸಿರುವ ವಿದ್ಯುತ್ ದರ ಪ್ರತಿ ಯೂನಿಟ್‌ಗೆ ರೂ. 6.51/- ರಂತೆ (ಆರು ರೂಪಾಯಿ ಐವತ್ತೊಂದು ಪೈಸೆ) ನಿಗದಿಪಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ಎ.ಚಪ್ಪರಬಂದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಇವರಿಗೆ :

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಗಾಗಿ.

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) ರವರ ಕಾರ್ಯದರ್ಶಿ. ಕರ್ನಾಟಕ, ಹೊಸ ಕಟ್ಟಡ. "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು 560001.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

---3

5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು-1.
7. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ ಮೆಸ್ಕಾಂ/ ಹೆಸ್ಕಾಂ/ ಜೆಸ್ಕಾಂ/ ಸೆಸ್ಕ್
8. ಕಾರ್ಯದರ್ಶಿ, ಕೆ.ಇ.ಆರ್.ಸಿ., ಬೆಂಗಳೂರು.
9. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11. ಜಂಟಿ ನಿರ್ದೇಶಕರು (ಎನ್‌ಸಿಇ), ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13. ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 277 ಎನ್‌ಸಿಇ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ.
ಬೆಂಗಳೂರು, ದಿನಾಂಕ:03-02-2017

## ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಎನ್ 277 ಎನ್‌ಸಿಇ 2015 ದಿನಾಂಕ: 21.01.2017ರ ಆದೇಶದ ಭಾಗದ 8 ನೇ ಸಾಲಿನಲ್ಲಿರುವ "ತಿರಸ್ಕೃತಗೊಂಡ ಫಲಾನುಭವಿಗಳಿಗೂ ಅನ್ವಯವಾಗುವಂತೆ" ಎಂಬುದರ ಬದಲಾಗಿ "ಅರ್ಜಿಯಲ್ಲಿ ಜಮೀನಿನ ಸರ್ವೆ ಸಂಖ್ಯೆಗಳನ್ನು ತಪ್ಪಾಗಿ ನಮೂದಿಸಿದ ಕಾರಣ ತಿರಸ್ಕೃತಗೊಂಡ ಫಲಾನುಭವಿಗಳಿಗೂ ಅನ್ವಯವಾಗುವಂತೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಬಿ.ವಿ. ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ, ಫೋನ್ ನಂ: 22034674

ಇವರಿಗೆ:

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಇವರಿಗೆ ಪ್ರಕಟಣೆಗಾಗಿ.

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) ರವರ ಕಾರ್ಯದರ್ಶಿ, ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು 560001.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು-1.
7. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ ಮೆಸ್ಕಾಂ/ ಹೆಸ್ಕಾಂ/ ಜೆಸ್ಕಾಂ/ ಸೆಸ್ಕ್
8. ಕಾರ್ಯದರ್ಶಿ, ಕೆ.ಇ.ಆರ್.ಸಿ, ಬೆಂಗಳೂರು.
9. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11. ಜಂಟಿ ನಿರ್ದೇಶಕರು (ಎನ್‌ಸಿಇ), ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13. ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 277 ಎನ್‌ಸಿಇ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:04/02/2017

## ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಎನ್ 277 ಎನ್‌ಸಿಇ 2015 ದಿನಾಂಕ: 21.01.2017ರ ಆದೇಶದ ಭಾಗದ8 ನೇ ಸಾಲಿನಲ್ಲಿರುವ **"ತಿರಸ್ಕೃತಗೊಂಡ ಫಲಾನುಭವಿಗಳಿಗೂ ಅನ್ವಯವಾಗುವಂತೆ"** ಎಂಬುದರ ಬದಲಾಗಿ **"ಅರ್ಜಿಯಲ್ಲಿ ಜಮೀನಿನ ಸರ್ವೆ ಸಂಖ್ಯೆಗಳನ್ನು ತಪ್ಪಾಗಿ ನಮೂದಿಸಿದ ಕಾರಣ ತಿರಸ್ಕೃತಗೊಂಡ ಅರ್ಜಿದಾರರಿಗೂ ಅನ್ವಯವಾಗುವಂತೆ"**ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಇನ್ನುಳಿದಂತೆ, ಸದರಿ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಮುಂದುವರೆದು, ಈ ಸಂಬಂಧ ದಿನಾಂಕ:03/02/2017ರಂದು ಹೊರಡಿಸಿದ್ದ ತಿದ್ದುಪಡಿ ಆದೇಶವನ್ನು ಈ ಮೂಲಕ ಹಿಂಪಡೆಯಲಾಗಿದೆ.

(ಬಿ.ವಿ. ಶ್ರೀನಿವಾಸಯ್ಯ)
ಸರ್ಕಾರದಅಧೀನಕಾರ್ಯದರ್ಶಿ
ಇಂಧನ ಇಲಾಖೆ,
ಫೋನ್ ನಂ: 22034674

ಇವರಿಗೆ:

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಇವರಿಗೆ ಪ್ರಕಟಣೆಗಾಗಿ.

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಜಿ ಹಾಎಸ್ಎಸ್ ಎ) ರವರ ಕಾರ್ಯದರ್ಶಿ. ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು 560001.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತುಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದಇಂಧನಅಭಿವೃದ್ಧಿ ನಿಯಮಿತ, ಬೆಂಗಳೂರು-1.
7. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ ಮೆಸ್ಕಾಂ/ ಹೆಸ್ಕಾಂ/ ಜೆಸ್ಕಾಂ/ ಸೆಸ್ಕ್.
8. ಕಾರ್ಯದರ್ಶಿ, ಕೆ.ಇ.ಆರ್.ಸಿ. ಬೆಂಗಳೂರು.
9. ಮಾನ್ಯಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11. ಜಂಟಿ ನಿರ್ದೇಶಕರು (ಎನ್‌ಸಿಇ), ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13. ಶಾಖಾ ರಕ್ಷಾಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 34 ವಿಎಸ್‌ಸಿ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು, ದಿನಾಂಕ:27-10-2017

## ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಎನ್ 277 ಎನ್‌ಸಿಇ 2015 ದಿನಾಂಕ:21/01/2017ರ ಆದೇಶದ ಭಾಗದ 8ನೇ ಸಾಲಿನಲ್ಲಿರುವ **"ತಿರಸ್ಕೃತಗೊಂಡ ಫಲಾನುಭವಿಗಳಿಗೂ ಅನ್ವಯವಾಗುವಂತೆ"** ಎಂಬುದರ ಬದಲಾಗಿ **"ತಿರಸ್ಕೃತಗೊಂಡ ಅರ್ಜಿದಾರರಿಗೂ ಅನ್ವಯವಾಗುವಂತೆ"** ಎಂದು ತಿದ್ದಿ ಓದಿಕೊಳ್ಳುವುದು.

ಇನ್ನುಳಿದಂತೆ, ಸದರಿ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಮುಂದುವರೆದು, ಈ ಸಂಬಂಧ ದಿನಾಂಕ:04/02/2017ರಂದು ಹೊರಡಿಸಿದ್ದ ತಿದ್ದುಪಡಿ ಆದೇಶವನ್ನು ಈ ಮೂಲಕ ಹಿಂಪಡೆಯಲಾಗಿದೆ.

(ಬಿ.ವಿ. ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ, ಫೋನ್ ನಂ: 22034674

**ಇವರಿಗೆ:**
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಇವರಿಗೆ ಪ್ರಕಟಣೆಗಾಗಿ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಜಿ &ಎಸ್‌ಎಸ್ ಎ) ರವರ ಕಾರ್ಯದರ್ಶಿ, ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು 560001.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತುಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು-1..
7. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ ಮೆಸ್ಕಾಂ/ ಹೆಸ್ಕಾಂ/ ಜೆಸ್ಕಾಂ/ ಸೆಸ್ಕ್.
8. ಕಾರ್ಯದರ್ಶಿ, ಕೆ.ಇ.ಆರ್.ಸಿ, ಬೆಂಗಳೂರು.
9. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11. ಜಂಟಿ ನಿರ್ದೇಶಕರು (ಎನ್‌ಸಿಇ), ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13. ಶಾಖಾ ರಕ್ಷಾಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 34 ವಿಎಸ್‌ಸಿ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು, ದಿನಾಂಕ:28-10-2017

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ, ವಿಕಾಸಸೌಧ,
ಬೆಂಗಳೂರು.

3900
28/10/17

ಇವರಿಗೆ,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ,
ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್,
ಬೆಂಗಳೂರು-560001.

ಮಾನ್ಯರೇ,

ವಿಷಯ: ಸೌರ ನೀತಿ 2014-21ರನ್ವಯ ಭೂಮಾಲೀಕತ್ವವುಳ್ಳ ರೈತರ ಮೂಲಕ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆ ಯೋಜನೆಯಡಿಯಲ್ಲಿ 1-3ಮೆ.ವ್ಯಾ. ಸಾಮರ್ಥ್ಯದ ವರ್ಗದಡಿಯಲ್ಲಿ ಜಮೀನಿನ ವಿವರಗಳನ್ನು ತಪ್ಪಾಗಿ ನಮೂದಿಸಿದ್ದ ಕಾರಣ ತಿರಸ್ಕೃತಗೊಂಡ ಅರ್ಜಿಗಳನ್ನು ಪರಿಗಣಿಸುವ ಕುರಿತು.

30/10/17

| | |
|---|---|
| ಉಲ್ಲೇಖ: | 1. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಇಎನ್ 34 ವಿಎಸ್‌ಸಿ 2017 ದಿನಾಂಕ:27.10.2017.<br>2. ತಮ್ಮ ಪತ್ರ ಸಂಖ್ಯೆ: ಕೆ.ಆರ್.ಇ.ಡಿ.ಎಲ್/07/ಎಸ್‌ಜಿ/ಭೂಮಾಲೀಕರು/ಎಫ್-283-III/2017/2195 ದಿನಾಂಕ:27.03.2017.<br>3. ಸರ್ಕಾರದ ಆದೇಶ ಸಂಖ್ಯೆ:ಇಎನ್ 277 ಎನ್‌ಸಿಇ 2015 ದಿನಾಂಕ:21.01.2017. |

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಉಲ್ಲೇಖ (2)ರ ಪತ್ರದಲ್ಲಿ ಸೌರ ನೀತಿ 2014-21ರನ್ವಯ ಭೂಮಾಲೀಕತ್ವವುಳ್ಳ ರೈತರ ಮೂಲಕ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆ ಯೋಜನೆಯಡಿಯಲ್ಲಿ 1-3ಮೆ.ವ್ಯಾ. ಸಾಮರ್ಥ್ಯದ ವರ್ಗದಡಿಯಲ್ಲಿ ಜಮೀನಿನ ವಿವರಗಳನ್ನು ತಪ್ಪಾಗಿ ನಮೂದಿಸಿದ್ದ ಕಾರಣ ತಿರಸ್ಕೃತಗೊಂಡ ನಾಲ್ಕು ಅರ್ಜಿಗಳ ಒಟ್ಟು ಸಾಮರ್ಥ್ಯವಾದ 10ಮೆ.ವ್ಯಾನ್ನು ಪರಿಗಣಿಸಿ ವಿದ್ಯುತ್ ಸರಬರಾಜುವಾರು ಹಂಚಿಕೆ ನೀಡುವಂತೆ ಕೋರಿರುತ್ತೀರಿ.

ಈ ಸಂಬಂಧ, ಉಲ್ಲೇಖ (1)ರ ಸರ್ಕಾರದ ತಿದ್ದುಪಡಿ ಆದೇಶ ಹಾಗೂ ಉಲ್ಲೇಖ (3)ರ ಸರ್ಕಾರದ ಆದೇಶಗಳನ್ವಯ, ಸದರಿ ವರ್ಗದಡಿಯಲ್ಲಿ ಈಗಾಗಲೇ ಹಂಚಿಕೆಯಾಗಿರುವ 306 ಮೆ.ವ್ಯಾ. ಸಾಮರ್ಥ್ಯಕ್ಕೆ, ಯೋಜನೆಯ 300ಮೆ.ವ್ಯಾ. ಜೇಷ್ಠತೆಯಲ್ಲಿದ್ದು, ಅರ್ಜಿ ಸಲ್ಲಿಸುವಾಗ ಜಮೀನಿನ ವಿವರಗಳನ್ನು ತಪ್ಪಾಗಿ ನಮೂದಿಸಿದ ಕಾರಣ ತಿರಸ್ಕೃತಗೊಂಡ 4 ಅರ್ಜಿಗಳ ಒಟ್ಟು ಸಾಮರ್ಥ್ಯ 10ಮೆ.ವ್ಯಾ ನ್ನು ಸೇರಿಸಿಕೊಂಡು ಒಟ್ಟು

316 ಮೆ.ವ್ಯಾ. ಸಾಮರ್ಥ್ಯಕ್ಕೆ ಸೀಮಿತಗೊಳಿಸಿ ಹಂಚಿಕೆ ಮಾಡಲು ಹಾಗೂ ಈ 10 ಮೆ.ವ್ಯಾ. ಸಾಮರ್ಥ್ಯವನ್ನು ಹೆಚ್ಚುವರಿಯಾಗಿ ಬೆಸ್ಕಾಂ-5ಮೆ.ವ್ಯಾ., ಸೆಸ್ಕ್-2ಮೆ.ವ್ಯಾ. ಮತ್ತು ಹೆಸ್ಕಾಂ-3ಮೆ.ವ್ಯಾ. ರಂತೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ವಿದ್ಯುತ್ ಸರಬರಾಜು ಕಂಪನಿವಾರು ಹಂಚಿಕೆ ಮಾಡಲು ನಿರ್ದೇಶಿತನಾಗಿದ್ದೇನೆ.

**ಷರತ್ತು/ನಿಬಂಧನೆ:**

I. ಸದರಿ ಯೋಜನೆಗಳನ್ನು ಹಂಚಿಕೆ ದಿನಾಂಕದಿಂದ 18 ತಿಂಗಳುಗಳ ಕಾಲಾವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು.

II. ಸರ್ವೇ ನಂಬರ್‌ಗಳ ಜಮೀನು ಮೂಲ ಅರ್ಜಿದಾರರ ಹೆಸರಿನಲ್ಲಿ ಇದೆಯೇ ಎಂಬುದನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ದೃಢೀಕರಣಪಡಿಸಿಕೊಳ್ಳುವುದು.

III. ಮೂಲ ಅರ್ಜಿದಾರರಲ್ಲದವರು ವಾರಸತ್ವದಲ್ಲಿ ಹಂಚಿಕೆಗೆ ಅರ್ಹರೇ ಎಂಬುದನ್ನು ಕಾನೂನಾತ್ಮಕವಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ದೃಢೀಕರಣಪಡಿಸಿಕೊಳ್ಳುವುದು.

**(ಅಪರ ಮುಖ್ಯ ಕಾರ್ಯದರ್ಶಿಗಳಿಂದ ಅನುಮೋದಿತ)**

ತಮ್ಮ ವಿಶ್ವಾಸಿ,

(ಬಿ.ವಿ. ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ: 22034674.